1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,
ನಂಜನಗೂಡು

**ಸಿ.ಸಿ.ಸಂಃ1070/2015**

ಪಿರ್ಯಾದಿ ಸರ್ಕಾರದ ಪರಃ ಬದನವಾಳು ಪೊಲೀಸರು

ವಿರುದ್ಧ

ಆರೋಪಿ ಃ 1 ಶೇಖರ ಬಿನ್ ಹಾರ್ಮೋನಿಯಮ್ ಮಾಸ್ಟರ್ ಕೆ ಪಿ ರಂಗಸ್ವಾಮಿ 40 ವರ್ಷ

2 ಶ್ರೀನಿವಾಸ ಉ.ಸೀನ ಬಿನ್ ರಂಗಯ್ಯ 30 ವರ್ಷ

3 ಶಿವನಾಗು ಬಿನ್ ಲೇಟ್ ಪೊಟ್ಟ ರಂಗಯ್ಯ 30 ವರ್ಷ

4 ಸಂದೀಪ ಬಿನ್ ಲೇಟ್ ಚಿನ್ನಪ್ಪಾಜಿ 32 ವರ್ಷ

5 ಚಿಕ್ಕಸ್ವಾಮಿ ಬಿನ್ ಮಾದೇಗೌಡ 40 ವರ್ಷ

6 ಮಹದೇವಸ್ವಾಮಿ ಬಿನ್ ಮಹದೇವಯ್ಯ 40 ವರ್ಷ

7 ಶಿವು ಬಿನ್ ನಂಜಯ್ಯ 28 40 ವರ್ಷ (ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)

8 ರಾಜೇಂದ್ರ ಪ್ರಸಾದ್ ಬಿನ್ ದೇವಯ್ಯ 35 ವರ್ಷ

9 ಕೆ ಶಿವಕುಮಾರ ಬಿನ್ ಲೇಟ್ ಕೆಂಪಸಿದ್ದಯ್ಯ 3435 ವರ್ಷ

ಎಲ್ಲರ ವಾಸಃ ಕಿರಗುಂದ ಗ್ರಾಮ, ನಂಜನಗೂಡು ತಾಲ್ಲೂಕು

**ದೋಷಾರೋಪಣೆ**

ಶ್ರೀಮತಿ.ಸರಿತ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ 02.11.2014 ರಂದು ಸಂಜೆ 4-00 ಗಂಟೆಯಲ್ಲಿ ಬದನವಾಳು ಪೊಲೀಸ ಠಾಣಾ ಸರಹದ್ದು ಮಡಳ್ಳಿ , ಕಲ್ಮಳ್ಳಿ ರಸ್ತೆಯ ಮಡಳ್ಳಿ ಗ್ರಾಮದ ರಾಜಮ್ಮ ಮತ್ತು ಮಲ್ಲು ಪುರ ಗ್ರಾಮದ ಮಹದೇವೆಗೌಡರ ಗದ್ದೆಯ ಜಮೀನಿನ ಪಕ್ಕದ ರಸ್ತೆಯಲ್ಲಿ ಕೆ.ಎ-10-ಟಿ -478 ಮಹೇಂದ್ರಾ ಟ್ರಾಕ್ಟರ್ ಮತ್ತು ಕೆ-02-ಇಡಿ-5806 ಹೋಂಡಾ ಆಕ್ಟಿವಾ ಬೈಕಿಗೆ

ಅಪಘಾತವಾಗಿ ಬೈಕ್ ಚಾಲಕ ಪುಟ್ಟರಾಜು ಬಿನ್ ದೊಡ್ಡಪಾಪಯ್ಯ ಸ್ಥಳದಲ್ಲಿ ಮೃತ ಪಟ್ಟಿದ್ದು, ಈ ಬಗ್ಗೆ ಚಾಸಾ.1 ರವರಿಗೆ ಮಾಹಿತಿ ದೊರೆತು ಸಂಜೆ 5-00 ಗಂಟೆಯಲ್ಲಿ ಸ್ಥಳಕ್ಕೆ ಹೋಗಿ ಚಾಸಾ.1 ರವರು ಮುಂದಿನ ಕ್ರಮ ಜರುಗಿಸಲು ಹೆಣವನ್ನು ಆಸ್ಪತ್ರೆಗೆ ಸಾಗಿಸಲು ಪ್ರಯತ್ನಿಸಿದಾಗ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡ ಕಾರಣ, ಭಾರತ ದಂಡ ಸಂಹಿತೆಯ ಕಲಂ 143 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೈಯಲ್ಲಿ ಅಪಾಯಕರ ಆಯುಧಗಳನ್ನು ಹೊಂದಿದ್ದ ಕಾರಣ, ಭಾರತ ದಂಡ ಸಂಹಿತೆಯ ಕಲಂ 144 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ,ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೂಗಾಡಿಕೊಂಡು ದಾಂದಲೆ ಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 147 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ,ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಟ್ರಾಕ್ಟರ್ ಮಾಲೀಕ ಸ್ಥಳದಲ್ಲಿ ಪರಿಹಾರ ನೀಡುವವರೆಗೆ ಹೆಣವನ್ನು ಸಾಗಿಸಲು ಬಿಡುವುದಿಲ್ಲ ಎಂದು ಹೆಣವನ್ನು ರಸ್ತೆ, ಮಧ್ಯೆ ಇಟ್ಟಿಕೊಂಡು, ರಸ್ತೆಗೆ ಕಲ್ಲುಗಳನ್ನು ಹಾಕಿ, ಸಂಜೆ 5-00 ಗಂಟೆಯಿಂದ ರಾತ್ರಿ 11-00 ಗಂಟೆಯವರೆಗೆ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿ ಪಡಿಸಿ ಅಕ್ರಮ ತಡೆಯನ್ನುಂಟು ಮಾಡಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.341 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ,ಆರೋಪಿತರಾದ ನೀವು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಚಾಸಾ. 01 ರವರು ನಿರ್ವಹಿಸುತ್ತಿದ್ದ ಸರ್ಕಾರಿ ಕೆಲಸಕ್ಕೆ ಅಡ್ಡಿ ಪಡಿಸಿರುತ್ತೀರಿ. ಆದ್ದರಿಂದ, ಆರೋಪಿತರಾದ ನೀವು ಭಾರತ ದಂಡ ಸಂಹಿತೆಯ ಕಲಂ.353 ಸಹವಾಚಕ 149 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 17.03.2026 ರಂದು ತೆರೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ನಂಜನಗೂಡು

**ಸಿ.ಸಿ.ಸಂಃ1070/2015**

ಪಿರ್ಯಾದಿ ಸರ್ಕಾರದ ಪರಃ ಬದನವಾಳು ಪೊಲೀಸರು

ವಿರುದ್ಧ

ಆರೋಪಿ ಃ
1 ಶೇಖರ ಬಿನ್ ಹಾರ್ಮೋನಿಯಮ್ ಮಾಸ್ಟರ್ ಕೆ ಪಿ ರಂಗಸ್ವಾಮಿ 40 ವರ್ಷ
2 ಶ್ರೀನಿವಾಸ ಉ.ಸೀನ ಬಿನ್ ರಂಗಯ್ಯ 30 ವರ್ಷ
3 ಶಿವನಾಗು ಬಿನ್ ಲೇಟ್ ಪೊಟ್ಟ ರಂಗಯ್ಯ 30 ವರ್ಷ
4 ಸಂದೀಪ ಬಿನ್ ಲೇಟ್ ಚಿನ್ನಪ್ಪಾಜಿ 32 ವರ್ಷ
5 ಚಿಕ್ಕಸ್ವಾಮಿ ಬಿನ್ ಮಾದೇಗೌಡ 40 ವರ್ಷ
6 ಮಹದೇವಸ್ವಾಮಿ ಬಿನ್ ಮಹದೇವಯ್ಯ 40 ವರ್ಷ
7 ಶಿವು ಬಿನ್ ನಂಜಯ್ಯ 28 40 ವರ್ಷ (ಪ್ರಕರಣವನ್ನು ಪ್ರತ್ಯೇಕಿಸಲಾಗಿದೆ)
8 ರಾಜೇಂದ್ರ ಪ್ರಸಾದ್ ಬಿನ್ ದೇವಯ್ಯ 35 ವರ್ಷ
9 ಕೆ ಶಿವಕುಮಾರ ಬಿನ್ ಲೇಟ್ ಕೆಂಪಸಿದ್ದಯ್ಯ 3435 ವರ್ಷ

ಎಲ್ಲರ ವಾಸಃ ಕಿರಗುಂದ ಗ್ರಾಮ, ನಂಜನಗೂಡು ತಾಲ್ಲೂಕು

ಃ ಆಪಾದನೆ ಃ

ಪ್ರಶ್ನೆಃ1– ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ಆಪಾದನೆಯನ್ನು ಅರ್ಥಮಾಡಿಕೊಂಡಿರುವಿರಾ?

6 ನೇ ಆರೋಪಿ ಉತ್ತರಃ

8 ನೇ ಆರೋಪಿ ಉತ್ತರಃ

9 ಆರೋಪಿ ಉತ್ತರಃ

ಪ್ರಶ್ನೆಃ2– ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

6 ನೇ ಆರೋಪಿ ಉತ್ತರಃ

**8 ನೇ ಆರೋಪಿ ಉತ್ತರಃ**

**9 ಆರೋಪಿ ಉತ್ತರಃ**

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ.

1 ನೇ ಹೆ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
**ನಂಜನಗೂಡು**